# ಕುಮಾರವ್ಯಾಸ ಭಾರತ

## ಅನುವಾದಕನ ಅನುಭವಗಳು



ಸಿ.ಎನ್. ರಾಮಚಂದ್ರನ್

ಹದಿನಾಲ್ಕನೆಯ ಶತಮಾನದಲ್ಲಿದ್ದ ಗದುಗಿನ ನಾರಣಪ್ಪ ಅರ್ಥಾತ್ ಕುಮಾರವ್ಯಾಸ, ವ್ಯಾಸಭಾರತವನ್ನು ಆಧರಿಸಿ, ಕನ್ನಡದಲ್ಲಿ 'ಕರ್ನಾಟ ಭಾರತ ಕಥಾಮಂಜರಿ' ಎಂಬ ಹೆಸರಿನಲ್ಲಿ ಮಹಾಭಾರತವನ್ನು ಮರುಸೃಷ್ಟಿ ಮಾಡಿದನು. ಇದೆಷ್ಟು ಜನಪ್ರಿಯವಾಯಿತೆಂದರೆ, ಇಂದು ಇದರ ಮೂಲ ಹೆಸರು ಮರೆತೇ ಹೋಗಿ ಅದು 'ಕುಮಾರವ್ಯಾಸ ಭಾರತ' ಎಂದೇ ಪ್ರಸಿದ್ಧವಾಗಿದೆ. ಗಮಕಿಗಳ ಮೂಲಕ ಹಾಗೂ ನಾಟಕ-ಯಕ್ಷಗಾನಗಳ ಮೂಲಕ, ಹಾಗೂ ಆ ಮಹಾಕವಿಯ ಪ್ರತಿಭೆ ಮತ್ತು ಸುಭಗ ಕಥನ ಇವುಗಳ ಮೂಲಕ 500 ವರ್ಷಗಳ ನಂತರವೂ ಈ ಕಾವ್ಯವು ವಿದ್ವಾಂಸರಿಗೆ ಹಾಗೂ ಜನಸಾಮಾನ್ಯರಿಗೆ ಪರಿಚಿತವಾಗಿದೆ, ಪ್ರಸ್ತುತವಾಗಿದೆ. ಈ ಕಾರಣದಿಂದ ಈ ಕಾವ್ಯವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಕನ್ನಡೇತರರಿಗೂ ಕುಮಾರವ್ಯಾಸನ ಪ್ರತಿಭೆಯನ್ನು ಪರಿಚಯಿಸಬೇಕೆಂಬ ಕಾವ್ಯಪ್ರಿಯರ ಬಹುಕಾಲದ ಕನಸೊಂದಿತ್ತು. ಆ ಕನಸು ನನಸಾದದ್ದು ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಅವರ ಮಗ ರೋಹನ್ ಮೂರ್ತಿ ಅವರು, ಹಾರ್ವರ್ಡ್ ವಿ.ವಿ.ಯಲ್ಲಿ ಒಂದು ಟ್ರಸ್ಟ್ ಸ್ಥಾಪಿಸಿ, ಅದರ ಮೂಲಕ ಪ್ರಾಚೀನ ಭಾರತೀಯ ಸಾಹಿತ್ಯಕೃತಿಗಳ ಇಂಗ್ಲಿಷ್ ಅನುವಾದಗಳ ಪ್ರಕಟಣೆಗೆ ಅನುವು ಮಾಡಿಕೊಟ್ಟಾಗ; 'ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ' ಯೋಜನೆಯ ಮೂಲಕ.

'ಕುಮಾರವ್ಯಾಸ ಭಾರತ'ವನ್ನು ಇಂಗ್ಲಿಷ್‌ಗೆ ಅನುವಾದಿಸುವ ಯೋಜನೆ ಸುಮಾರು ಆರೇಳು ವರ್ಷಗಳ ಹಿಂದೆ ಪ್ರಾರಂಭವಾಯಿತು. ಮೊದಲಿಗೆ, ನ್ಯೂಯಾರ್ಕ್‌ನ ಸ್ಟೋನಿಬ್ರೂಕ್ ವಿವಿಯಲ್ಲಿ 'ಭಾರತೀಯ ಅಧ್ಯಯನ ಕೇಂದ್ರ'ದ ಮುಖ್ಯಸ್ಥರಾಗಿರುವ ಡಾ. ಎಸ್.ಎನ್. ಶ್ರೀಧರ್, ಅನುವಾದ ಕೇಂದ್ರದ ನಿರ್ದೇಶಕರಾದ ಡಾ. ಶೆಲ್ಡನ್ ಪೊಲಾಕ್ ಅವರನ್ನು ಸಂಪರ್ಕಿಸಿ, ಅವರಿಗೆ ಕುಮಾರವ್ಯಾಸ ಭಾರತದ ಗುಣಗಳನ್ನು ಮನದಟ್ಟು ಮಾಡಿ, ಆ ಕಾವ್ಯದ ಅನುವಾದಕ್ಕೆ ಪೊಲಾಕ್ ಅವರ ಒಪ್ಪಿಗೆ ಪಡೆದರು. ನಂತರ, ಇದು ಒಬ್ಬರಿಂದ ಆಗುವ ಕೆಲಸವಲ್ಲವೆಂದು, ಈ ಯೋಜನೆಗೆ ಸಮಾನ ಮನಸ್ಕರಾದ ಡಾ. ಎಚ್.ಎಸ್. ಶಿವಪ್ರಕಾಶ್, ಡಾ. ನಾರಾಯಣ ಹೆಗ್ಡೆ, ಡಾ. ಎಚ್.ಎಸ್. ರಾಘವೇಂದ್ರ ರಾವ್, ಮತ್ತು ಡಾ. ಸಿ.ಎನ್. ರಾಮಚಂದ್ರನ್ ಇವರುಗಳನ್ನೂ